ತಂತಿ ವಿಳಾಸ ಯೂನಿರಿಜ್
ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/39/2020-21

ದಿನಾಂಕ 22-10-2020

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 14-09-2020ರಂದು ನಡೆದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ 14-09-2020ರಂದು ಸೋಮವಾರ ಬೆಳಿಗ್ಗೆ 11-30 ಗಂಟೆಗೆ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ. ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ಹೇಳಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ, ಆದುದರಿಂದ. ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 22-11-2020ರ ಒಳಗಾಗಿ, ಉಪಕುಲಸಚಿವರು, ಸಿಂಡಿಕೇಟ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

Lingaraj 22/10/2020
ಉಪಕುಲಸಚಿವರು(ಪ್ರಾಧಿಕಾರ)

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು - ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ/ದೈಹಿಕ ಶಿಕ್ಷಣ, ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಉಪಕುಲಸಚಿವರು, ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರೀಕ್ಷಾಂಗ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಸಹಾಯಕ ಕುಲಸಚಿವರು, ಶೈಕ್ಷಣಿಕ/ಆಡಳಿತ/ಸಾಮಾನ್ಯ/ಪರೀಕ್ಷಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕಛೇರಿ ಪ್ರತಿ.

AC Forwarding letter

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ದಿನಾಂಕ:14-09-2020ರಂದು ಪೂರ್ವಾಹ್ನ 11-30 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳು.

<u>ಸಭೆಗೆ ಹಾಜರಾಗಿದ್ದ ಸದಸ್ಯರುಗಳು</u>

1. ಪ್ರೊ.ಜಿ.ಹೇಮಂತ್‌ಕುಮಾರ್, ...ಕುಲಪತಿಗಳು ಹಾಗೂ ಅಧ್ಯಕ್ಷರು
   ಆಯುಕ್ತಕರು ಕಾಲೇಜು ಶಿಕ್ಷಣ, ಬೆಂಗಳೂರು, ಇವರ ಪರವಾಗಿ
2. ಶ್ರೀ ಆರ್. ಮೂಗೇಶಪ್ಪ ... ಸದಸ್ಯರು
   ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ, ಮೈಸೂರು
3. ಶ್ರೀ ಎಂ. ಶ್ರೀನಿವಾಸ್, ವಿಧಾನಸಭಾ ಸದಸ್ಯರು ... ಸದಸ್ಯರು
4. ಶ್ರೀ ಎಲ್. ನಾಗೇಂದ್ರ, ವಿಧಾನಸಭಾ ಸದಸ್ಯರು ... ಸದಸ್ಯರು
5. ಶ್ರೀ ಶಾಂತಕುಮಾರ್. ಕೆ ... ಸದಸ್ಯರು
6. ಡಾ. ಕೆ. ಕೆ. ವಿಶಾಲಾಕ್ಷಿ ... ಸದಸ್ಯರು
7. ಡಾ. ನಾಗರಾಜು ... ಸದಸ್ಯರು
8. ಶ್ರೀ ದಿನೇಶ್ ಎಂ ಗೋನ್‌ಕರ್ ... ಸದಸ್ಯರು
9. ಡಾ. ಬಿ. ಎನ್. ಆಶಾ ... ಸದಸ್ಯರು
10. ಡಾ. ಎಂ. ಶಾರದ ... ಸದಸ್ಯರು
11. ಡಾ. ಜೆ. ಎನ್. ವೆಂಕಟೇಶ್ ... ಸದಸ್ಯರು
12. ಡಾ. ಬಿ. ರಾಜಣ್ಣ ... ಸದಸ್ಯರು
13. ಪ್ರೊ. ಎನ್. ಎಂ. ತಳವಾರ್ ... ಸದಸ್ಯರು
14. ಪ್ರೊ. ಡಿ. ಆನಂದ ... ಸದಸ್ಯರು
15. ಪ್ರೊ. ಶಿವಬಸವಯ್ಯ ... ಸದಸ್ಯರು
16. ಪ್ರೊ. ಎಸ್. ಆರ್. ನಿರಂಜನ ... ಸದಸ್ಯರು
17. ಪ್ರೊ. ಆರ್. ರಾಜಣ್ಣ ... ಸದಸ್ಯರು
18. ಪ್ರೊ. ಸೋನರ್ ನಂದಪ್ಪ. ಡಿ ... ಸದಸ್ಯರು
19. ಪ್ರೊ. ಎಂ. ಜಿ. ಮಂಜುನಾಥ್ ... ಸದಸ್ಯರು
20. ಪ್ರೊ. ನಿಂಗಮ್ಮ ಸಿ ಬೆಟ್ಸೂರ್ ... ಸದಸ್ಯರು
21. ಡಾ. ಎಸ್.ಟಿ. ರಾಮಚಂದ್ರ, ... ಸದಸ್ಯರು
    ನಿರ್ದೇಶಕರು (ಪ್ರಭಾರ), ವಿದ್ಯಾರ್ಥಿ ಕ್ಷೇಮಪಾಲನ
22. ಪ್ರೊ.ಎನ್.ಕೆ.ಲೋಕನಾಥ್, ನಿರ್ದೇಶಕರು, ಪಿ.ಎಂ.ಇ.ಬಿ. ... ಸದಸ್ಯರು
23. ಡಾ.ಎಸ್.ಶ್ರೀಕಂಠಸ್ವಾಮಿ ... ಸದಸ್ಯರು
    ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ
24. ಡಾ.ಪಿ.ಕೃಷ್ಣಯ್ಯ, ನಿರ್ದೇಶಕರು (ಪ್ರಭಾರ),
    ದೈಹಿಕ ಶಿಕ್ಷಣ ವಿಭಾಗ ... ಸದಸ್ಯರು
25. ಪ್ರೊ. ಟಿ. ಎಸ್. ದೇವರಾಜ, ಹಣಕಾಸು ಅಧಿಕಾರಿಗಳು ... ಸದಸ್ಯರು
26. ಪ್ರೊ.ಕೆ.ಎಂ.ಮಹದೇವನ್, ಕುಲಸಚಿವ(ಪರೀಕ್ಷಾಂಗ)
    ಹಾಗೂ ಕುಲಸಚಿವ (ಪ್ರಭಾರ) ... ಸದಸ್ಯ ಕಾರ್ಯದರ್ಶಿ

<u>ವಿಶೇಷ ಆಹ್ವಾನಿತರು</u>

27. ಪ್ರೊ. ಜಿ. ವೆಂಕಟೇಶ್‌ಕುಮಾರ್

ಸಭೆಗೆ ಹಾಜರಾಗದವರು

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ, ಬೆಂಗಳೂರು
2. ಶ್ರೀ ಸಿ. ಎಸ್. ನಿರಂಜನ್‌ಕುಮಾರ್, ವಿಧಾನಸಭಾ ಸದಸ್ಯರು
3. ಶ್ರೀ ಪ್ರೀತಂ, ವಿಧಾನಸಭಾ ಸದಸ್ಯರು
4. ಶ್ರೀ ಎಂ. ಎ. ಗೋಪಾಲ್‌ಸ್ವಾಮಿ, ಎಂ.ಎಲ್.ಸಿ
5. ಶ್ರೀ ಕೆ. ಟಿ. ಶ್ರೀಕಂಠೇಗೌಡ, ಎಂ.ಎಲ್.ಸಿ
6. ಶ್ರೀ ಕೆ. ಟಿ. ಕೃಷ್ಣೇಗೌಡ
7. ಡಾ. ವಿ. ಎಸ್. ಹನುಮಂತರಾಯ
8. ಪ್ರೊ. ರಮೇಶ್, ಡೀನರು, ಕಾನೂನು ನಿಕಾಯ
9. ಡಾ. ಸರಸ್ವತಿ, ಪ್ರಭಾರ ಗ್ರಂಥಪಾಲಕರು, ಮೈವಿವಿ, ಮೈಸೂರು

ಮೊದಲಿಗೆ, ಇತ್ತೀಚೆಗೆ ದೈವಾಧೀನರಾದ ಶ್ರೇಷ್ಠ ಹಿರಿಯ ಮುತ್ಸದ್ದಿ, ಭಾರತರತ್ನ ಪ್ರಶಸ್ತಿ ಪುರಸ್ಕೃತ ಹಾಗೂ ಭಾರತದ ಮಾಜಿ ರಾಷ್ಟ್ರಪತಿಯಾದ ಶ್ರೀ ಪ್ರಣಬ್ ಮುಖರ್ಜಿರವರು ನಿಧನರಾದ ಪ್ರಯುಕ್ತ ಮೃತರ ಗೌರವಾರ್ಥ ಎರಡು ನಿಮಿಷಗಳ ಕಾಲ ಮೌನವನ್ನಾಚರಿಸಲಾಯಿತು.

ಮಾನ್ಯ ಕುಲಪತಿಗಳು ಶಿಕ್ಷಣ ಮಂಡಳಿಯ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ, ಕುಲಸಚಿವರು (ಪರೀಕ್ಷಾಂಗ)ರವರು ಶಿಕ್ಷಣ ಮಂಡಳಿಗೆ ಹೊಸದಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸಭೆಗೆ ಪರಿಚಯಿಸಿ, ಅವರನ್ನೂ ಸಹ ಸಭೆಗೆ ಸ್ವಾಗತಿಸಲಾಯಿತು.

1. ಶ್ರೀ ಸಿ.ಎಸ್.ನಿರಂಜನ್ ಕುಮಾರ್, ಮಾನ್ಯ ವಿಧಾನಸಭಾ ಸದಸ್ಯರು, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ.
2. ಶ್ರೀ ಪ್ರೀತಮ್ ಜೆ.ಗೌಡ, ಮಾನ್ಯ ವಿಧಾನಸಭಾ ಸದಸ್ಯರು, ಹಾಸನ ಜಿಲ್ಲೆ, ಹಾಸನ.
3. ಶ್ರೀ ಎಂ. ಶ್ರೀನಿವಾಸ್, ಮಾನ್ಯ ವಿಧಾನಸಭಾ ಸದಸ್ಯರು, ಮಂಡ್ಯ ಜಿಲ್ಲೆ, ಮಂಡ್ಯ.
4. ಶ್ರೀ ಎಲ್. ನಾಗೇಂದ್ರ, ಮಾನ್ಯ ವಿಧಾನಸಭಾ ಸದಸ್ಯರು, ಚಾಮರಾಜಕ್ಷೇತ್ರ, ಮೈಸೂರು.
5. ಶ್ರೀ ಎಂ.ಎ.ಗೋಪಾಲಸ್ವಾಮಿ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಬೆಂಗಳೂರು.
6. ಪ್ರೊ. ಆರ್.ರಾಜಣ್ಣ, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
7. ಪ್ರೊ. ಸೋನರ್‌ನಂದಪ್ಪ, ಡಿ. ಗಣಿತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
8. ಪ್ರೊ.ಎಂ.ಜಿ.ಮಂಜುನಾಥ್, ನಿರ್ದೇಶಕರು, ಕುವೆಂಪು ಕನ್ನಡಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.
9. ಡಾ. ವೆಂಕಟೇಶ್.ಜೆ.ಎನ್. ಪ್ರಾಂಶುಪಾಲರು, ಶ್ರೀ ಅದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.
10. ಡಾ. ವೈ.ಎಸ್.ಹನುಮಂತರಾಯ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನಗೋಡು, ಹುಣಸೂರುತಾ. ಮೈಸೂರುಜಿಲ್ಲೆ.
11. ಡಾ. ರಾಜಣ್ಣ ಬಿ, ಪ್ರಾಂಶುಪಾಲರು, ಪಿ.ಎಲ್.ಎನ್, ಪ್ರಥಮ ದರ್ಜೆಕಾಲೇಜು, ಪುರಿಗಾಲಿ.

ಇದುವರೆಗೂ ಶಿಕ್ಷಣ ಮಂಡಳ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಶ್ರೀ ಸಿ.ಎಸ್.ರಘು, ಸರ್ಕಾರದ ನಾಮ ನಿರ್ದೇಶಿತರು, ಗಂಗೋತ್ರಿ ಬಡವಾಣೆ, ಮೈಸೂರು.
2. ಶ್ರೀ ಬೆಳವಾಡಿ ಪ್ರಭಾಕರ್, ಸರ್ಕಾರದ ನಾಮ ನಿರ್ದೇಶಿತರು, ಬೆಳವಾಡಿ, ಮೈಸೂರು.
3. ಪ್ರೊ. ಬಿ.ಎಸ್.ವಿಶ್ವನಾಥ್, ಜೀವ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
4. ಪ್ರೊ. ಹೆಚ್.ಟಿ. ಬಸವರಾಜಪ್ಪ, ಭೂವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
5. ಡಾ.ಪಿ.ಎಸ್.ಸುರೇಶ್, ಪ್ರಾಂಶುಪಾಲರು, ಶಾರದ ವಿಲಾಸ ಶಿಕ್ಷಣ ಕಾಲೇಜು, ಕೃಷ್ಣಮೂರ್ತಿಪುರಂ, ಮೈಸೂರು.
6. ಡಾ.ವಿ.ಶಿವಪ್ರಸಾದ್, ನಿರ್ದೇಶಕರು, ಸೆಂಟ್ರಲ್ ಸಿರಿಕಲ್ಚರ್ ರೀಸರ್ಚ್ ಮತ್ತು ಟ್ರೈನಿಂಗ್ ಇನ್ಸ್ಟಿಟ್ಯೂಟ್, ಮೈಸೂರು.
7. ಡಾ.ಎಂ.ಪ್ರೀತಿ, ಪ್ರಾಂಶುಪಾಲರು, ಟಿಟಿಎಲ್ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಸರಸ್ವತಿಪುರಂ, ಮೈಸೂರು.

**ನಂತರ ಕುಲಪತಿಯವರು ಕಾರ್ಯಸೂಚಿಯಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.**

| **ವಿಷಯ ಸಂಖ್ಯೆ** | **ವಿಷಯ ಸಂಕ್ಷಿಪ್ತವಾಗಿ** |
|---|---|
| I | ಹಿಂದಿನ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | ದಿನಾಂಕ: 18-06-2020ರಂದು ನಡೆದ ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸಲಾಯಿತು. |
| I.1 | ದಿನಾಂಕ 18-06-2020 ರಂದು ಜರುಗಿದ ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡವಳಿಯಲ್ಲಿ **M.A in Tribal Developmentಕೋರ್ಸು ಹಾಗೂ M.Sc Yogic Science ಕೋರ್ಸ್‌ಗಳಿಗೆ** ಸಂಬಂಧಿಸಿದ ತೀರ್ಮಾನಗಳನ್ನು ತಿದ್ದುಪಡಿಯೊಂದಿಗೆ ನಡವಳಿಯನ್ನು ದೃಢೀಕರಿಸುವ ಬಗ್ಗೆ, |
| **ತೀರ್ಮಾನ** | ದಿನಾಂಕ 18-06-2020 ರಂದು ಜರುಗಿದ ಶಿಕ್ಷಣ ಮಂಡಳಿಯ ಮೂರನೇ ಸಾಮಾನ್ಯ ಸಭೆಯ ನಡವಳಿಯಲ್ಲಿ **M.A in Tribal Developmentಕೋರ್ಸು ಹಾಗೂ M.Sc Yogic Science ಕೋರ್ಸ್‌ಗಳಿಗೆ** ಸಂಬಂಧಿಸಿದ ತೀರ್ಮಾನಗಳನ್ನು ತಿದ್ದುಪಡಿಯೊಂದಿಗೆ ಹಿಂದಿನ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |
| II.1 | 2019-20ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳು. |
| | 2019-20ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ಧಪಡಿಸಲಾಗಿದ್ದು, ಸರ್ಕಾರಿ ಲೆಕ್ಕ ಪರಿಶೋಧಕರವರಿಂದ ಲೆಕ್ಕ ಪರಿಶೋಧನೆ ಮಾಡುವುದಕ್ಕೆ ಪೂರ್ವಭಾವಿಯಾಗಿ ಹಣಕಾಸು ಸಮಿತಿ, ಸಿಂಡಿಕೇಟ್ ಸಭೆ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ. ಈ ಸಂಬಂಧ ಹಣಕಾಸು ಸಮಿತಿ ಮತ್ತು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದ್ದು, 2019-20ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಸಂಕ್ಷಿಪ್ತವಾಗಿ ಹಣಕಾಸು ಅಧಿಕಾರಿಗಳು ಸಭೆಯಲ್ಲಿ ಮಂಡಿಸಿ, ವಿದ್ಯಾವಿಷಯಕ ಪರಿಷತ್ ಸಭೆ ಅನುಮೋದಿಸಬೇಕೆಂದು ಕೋರಿದರು. |
| **ತೀರ್ಮಾನ** | 2019-20ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಅನುಮೋದಿಸಲಾಯಿತು. |

| | |
|---|---|
| II.2 | ಹಾಸನ ಜಿಲ್ಲೆಯ ಹೆತ್ತೂರಿನ ಹಾಗೂ ಚಾಮರಾಜನಗರ ಜಿಲ್ಲೆಯ ತೆರಕಣಾಂಬಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾಗಿ ಪರಿವರ್ತಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ರಾಷ್ಟ್ರೀಯ ನೂತನ ಶಿಕ್ಷಣ ನೀತಿ-2020ರ ಸಮಗ್ರತಾ ದೃಷ್ಟಿಯ ಬಹುಶಿಸ್ತೀಯ ಉದ್ಯೋಗಾಭಿ ಮುಖ ಶಿಕ್ಷಣವನ್ನು ಬಹು ಆಗಮನ-ನಿರ್ಗಮನ ಆಯ್ಕೆಯ ಸಹಿತ ಅನುಷ್ಠಾನಗೊಳಿಸುವ ಸಂಬಂಧ ಹಾಸನ ಜಿಲ್ಲೆಯ ಹೆತ್ತೂರಿನ ಹಾಗೂ ಚಾಮರಾಜನಗರ ಜಿಲ್ಲೆಯ ತೆರಕಣಾಂಬಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾಗಿ ಪರಿವರ್ತಿಸುವ ಸಂಬಂಧ ಈಗಾಗಲೇ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದಿದ್ದು, ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಬೇಕೆಂದು ಕೋರಿದರು.<br><br>ಪ್ರೊ.ಜಿ.ವೆಂಕಟೇಶ್‌ಕುಮಾರ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಇವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ 215 ಕಾಲೇಜುಗಳು ಸಂಯೋಜನೆಗೊಳಪಟ್ಟಿದ್ದು, 03 ಘಟಕ ಕಾಲೇಜುಗಳಿರುತ್ತದೆ. ಹಾಸನ ಜಿಲ್ಲೆಯ ಹೆತ್ತೂರಿನ ಹಾಗೂ ಚಾಮರಾಜನಗರ ಜಿಲ್ಲೆಯ ತೆರಕಣಾಂಬಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳನ್ನು ಸರ್ಕಾರವು ಆಡಳಿತಾತ್ಮಕ ಕಾರಣಗಳಿಗಾಗಿ ವರ್ಗಾಯಿಸಲು ತೀರ್ಮಾನಿಸಿರುವುದರಿಂದ, ಈ ಎರಡು ಕಾಲೇಜುಗಳನ್ನು ವಿಶ್ವವಿದ್ಯಾನಿಲಯವು ಘಟಕ ಕಾಲೇಜುಗಳಾಗಿ ಪರಿವರ್ತಿಸುವ ಸಂಬಂಧ ಸಾಧಕ-ಭಾಧಕಗಳನ್ನು ಪರಾಮರ್ಶಿಸಬೇಕೆಂದು ತಿಳಿಸಿದರು.<br><br>ಪ್ರೊ.ಡಿ.ಆನಂದ್, ಡೀನರು, ವಾಣಿಜ್ಯ ನಿಕಾಯ, ಇವರು ಮಾತನಾಡಿ, ಹಾಸನ ಜಿಲ್ಲೆಯ ಹೆತ್ತೂರಿನ ಹಾಗೂ ಚಾಮರಾಜನಗರ ಜಿಲ್ಲೆಯ ತೆರಕಣಾಂಬಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಮೈಸೂರು ವಿಶ್ವವಿದ್ಯಾನಿಲಯವು ಘಟಕ ಕಾಲೇಜುಗಳಾಗಿ ಪರಿವರ್ತಿಸಿ, ಬಿ.ಎ., ಬಿ.ಕಾಂ ಹಾಗೂ ಬಿ.ಬಿ.ಎ ಕೋರ್ಸುಗಳನ್ನು ಪ್ರಾರಂಭಿಸುವ ಬದಲು ಕೌಶಲ್ಯ ಹಾಗೂ ಉದ್ಯೋಗಾಧರಿತ ಕೋರ್ಸುಗಳನ್ನು ಪ್ರಾರಂಭಿಸಿ ವಿದ್ಯಾರ್ಥಿಗಳ ಪ್ರವೇಶಾತಿ ಅನುಪಾತ ಹೆಚ್ಚಿಸಬೇಕೆಂದು ತಿಳಿಸಿದರು. |
| **ತೀರ್ಮಾನ** | ಹಾಸನ ಜಿಲ್ಲೆಯ ಹೆತ್ತೂರಿನ ಹಾಗೂ ಚಾಮರಾಜನಗರ ಜಿಲ್ಲೆಯ ತೆರಕಣಾಂಬಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾಗಿ ಪರಿವರ್ತಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.3 | ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ ಸಭೆಯ ನಡವಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ ಕೋರುವ ಬಗ್ಗೆ |
| **ತೀರ್ಮಾನ** | ದಿನಾಂಕ: 19-06-2020ರಂದು ನಡೆದ ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ ಸಭೆಯ ನಡವಳಿಯನ್ನು ಅನುಮೋದಿಸಲಾಯಿತು |
| II.4 | 2021-22ನೇ ಶೈಕ್ಷಣಿಕ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಯೋಜನೆಯಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಇಂಜಿನಿಯರಿಂಗ್ ಘಟಕ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, 2021-22ನೇ ಶೈಕ್ಷಣಿಕ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಯೋಜನೆಯಡಿ ಸ್ವಯಂ ಹಣಕಾಸು ಮೂಲಕ ಅವಶ್ಯಕತೆಯಿರುವ ಬೋಧಕರುಗಳನ್ನು ನೇಮಿಸುವುದರೊಂದಿಗೆ ಇಂಜಿನಿಯರಿಂಗ್ ಘಟಕ ಕಾಲೇಜನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿರುತ್ತದೆ. ಮೈಸೂರು ವಿಶ್ವವಿದ್ಯಾನಿಲಯವು ಪ್ರತಿಷ್ಠಿತ |

| | |
|---|---|
| | ವಿಶ್ವವಿದ್ಯಾನಿಲಯವಾಗಿದ್ದು, ಮೈಸೂರು ವಿಶ್ವವಿದ್ಯಾನಿಲಯವು ಇಂಜಿನಿಯರಿಂಗ್ ಕಾಲೇಜು ಪ್ರಾರಂಭ ಮಾಡುವುದರಿಂದ ಸಾಕಷ್ಟು ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಲಿದ್ದಾರೆ. ಇದರಿಂದ ರ್‍ಯಾಂಕಿಂಗ್ ಸುಧಾರಣೆಗೂ ಸಹಕಾರಿಯಾಗುವುದರೊಂದಿಗೆ ಪ್ರತಿ ವರ್ಷ 4-5 ಕೋಟಿ ರೂಪಾಯಿಗಳು ಆದಾಯ ಬರುವುದನ್ನು ನಿರೀಕ್ಷಿಸಲಾಗಿದೆ. ಈ ಆದಾಯದಿಂದ ಉಳಿದ ವಿಭಾಗಗಳನ್ನು ಅಭಿವೃದ್ಧಿಪಡಿಸಲಾಗುವುದು. ಆದ್ದರಿಂದ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಇಂಜಿನಿಯರಿಂಗ್ ಘಟಕ ಕಾಲೇಜನ್ನು ಪ್ರಾರಂಭಿಸಲು ಸಭೆಯು ಅನುಮೋದನೆ ನೀಡಬೇಕೆಂದು ತಿಳಿಸಿದರು.<br><br>ಪ್ರೊ.ಜಿ.ವೆಂಕಟೇಶ್‌ಕುಮಾರ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ಇವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸುವುದು ಸ್ವಾಗತಾರ್ಹವಾಗಿದೆ. ಆದರೆ, ಈಗಾಗಲೇ ಅನುಮತಿ ಪಡೆಯದೇ ಸಾಕಷ್ಟು ಕೋರ್ಸುಗಳಿವೆ. ಇದರಿಂದ ಭವಿಷ್ಯದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸುವ ಮೊದಲು AICTE ಅನುಮತಿ ಪಡೆಯಬೇಕೆಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸುವ ಮೊದಲು AICTE ಅನುಮತಿ ಪಡೆದು, ಸರ್ಕಾರಕ್ಕೂ ಪ್ರಸ್ತಾವನೆಯನ್ನು ಅನುಮೋದನೆಗೆ ಸಲ್ಲಿಸಿ, ಅನುಮೋದನೆಗೊಂಡ ನಂತರವೇ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಲಾಗುವುದೆಂದು ತಿಳಿಸಿದರು. |
| **ತೀರ್ಮಾನ** | 2021-22ನೇ ಶೈಕ್ಷಣಿಕ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಯೋಜನೆಯಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಇಂಜಿನಿಯರಿಂಗ್ ಕಾಲೇಜನ್ನು AICTE ನವದೆಹಲಿ, ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ಅನುಮೋದನೆಯನ್ನು ಪಡೆದ ನಂತರ ಪ್ರಾರಂಭಿಸಲು ಸಭೆಯು ಅನುಮೋದಿಸಿತು. |
| II.5 | 2016-2017ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ |
| | 2016-2017ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಸಿದ್ಧಪಡಿಸಲಾಗಿರುವ ಅನುಪಾಲನಾ ವರದಿಯನ್ನು ಸಂಕ್ಷಿಪ್ತವಾಗಿ ಸಭೆಯಲ್ಲಿ ಹಣಕಾಸು ಅಧಿಕಾರಿಗಳು ಮಂಡಿಸುತ್ತಾ, ಈ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಹಾಗೂ ಸರ್ಕಾರಿ ಲೆಕ್ಕ ಪರಿಶೋಧಕರಿಗೆ ಕಳುಹಿಸಬೇಕಾಗಿರುವುದರಿಂದ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಸಿದ್ಧಪಡಿಸಲಾಗಿರುವ ಅನುಪಾಲನಾ ವರದಿಗೆ ವಿದ್ಯಾವಿಷಯಕ ಪರಿಷತ್ ಅನುಮೋದಿಸಬೇಕೆಂದು ತಿಳಿಸಿದರು. |
| **ತೀರ್ಮಾನ** | 2016-2017ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಸಿದ್ಧಪಡಿಸಲಾಗಿರುವ ಅನುಪಾಲನಾ ವರದಿಯನ್ನು ಅನುಮೋದಿಸಲಾಯಿತು. |
| II.6 | ಪಿಹೆಚ್.ಡಿ ನಿಯಮಾವಳಿ 2017ರ ತಿದ್ದುಪಡಿಯನ್ನು ಮಾಡಿರುವ ಬಗ್ಗೆ. |
| | ಪ್ರೊ.ಜಿ.ವೆಂಕಟೇಶ್‌ಕುಮಾರ್‌ರವರು ಮಾತನಾಡಿ, ತಿದ್ದುಪಡಿಯಾಗಿರುವ ಕ್ರಮ ಸಂಖ್ಯೆ: 4ರ ಅಂಶದಲ್ಲಿ ಈ ಕೆಳಕಂಡಂತೆ ಸ್ವಲ್ಪಮಟ್ಟಿನ ತಿದ್ದುಪಡಿಯಾಗಬೇಕೆಂದು ತಿಳಿಸಿದರು.<br><br>**Existing:** A Candidate has to qualify the Ph.D course work examination obtaining minimum of 50% of marks for SC/ST/CAT-I student and minimum of 55% of marks for other category students are eligible for the permanent registration in their respective discipline /subjects. |

| | |
|---|---|
| | **<u>Revised:</u>** A Candidate has to qualify the Ph.D course work examination obtaining minimum of 50% of marks for SC/ST/CAT-I student and minimum of 55% of marks for other category students. Such students shall be eligible for the permanent registration in their respective discipline /subjects.<br><br>ಪ್ರೊ.ಎಸ್.ಆರ್.ನಿರಂಜನ್‌ರವರು ಮಾತನಾಡಿ, ಪಿಹೆಚ್.ಡಿ ನಿಯಮಾವಳಿ 2017ರ ತಿದ್ದುಪಡಿಯಲ್ಲಿ Ph.D course work examination ನಲ್ಲಿ ಪಜಾ/ಪವ/ಪ್ರವರ್ಗ-1 ಹಾಗೂ ಇತರೆ ವರ್ಗದ ವಿದ್ಯಾರ್ಥಿಗಳು ಪಿಹೆಚ್.ಡಿEnroll ಪಡೆಯಲು ಪಡೆಯಬೇಕಾಗಿರುವ ಅಂಕಗಳು ಹೆಚ್ಚಾಗಿದ್ದು, ಸ್ನಾತಕೋತ್ತರ ಪದವಿಯಲ್ಲಿ ರ್‍ಯಾಂಕ್ ತೆಗೆದುಕೊಂಡಿರುವ ವಿದ್ಯಾರ್ಥಿಗಳಿಗೂ ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವ ಈ ಅಂಕ ಪಡೆಯುವುದು ಕಷ್ಟವಾಗಿರುತ್ತದೆ. ಆದ್ದರಿಂದ ಯುಜಿಸಿ ನಿಯಮಾವಳಿಯನ್ನು ಪರಿಶೀಲಿಸಿ, ಈಗ ನಿಗಧಿಗೊಳಿಸಿರುವ ಅಂಕವನ್ನು ಕಡಿಮೆಗೊಳಿಸುವುದಕ್ಕೆ ಅವಕಾಶವಿದೆಯೇ ಎಂದು ಪುನರ್ ಪರಿಶೀಲಿಸಿದರೆ ಸೂಕ್ತವೆಂದು ತಿಳಿಸಿದರು. ನಂತರ, ಪ್ರೊ.ಜಿ.ವೆಂಕಟೇಶ್‌ಕುಮಾರ್ ಮಾತನಾಡಿ, ಪ್ರೊ.ಎಸ್.ಆರ್.ನಿರಂಜನ್‌ರವರು ಅಭ್ಯರ್ಥಿಗಳ ಹಿತದೃಷ್ಟಿಯಿಂದ ಈ ವಿಷಯ ಪ್ರಸ್ತಾಪಿಸಿರುವುದು ಸೂಕ್ತವಾದುದೇ. ಆದರೆ, ಇತ್ತೀಚಿನ ದಿನಗಳಲ್ಲಿ ಸಂಶೋಧನಾ ಗುಣಮಟ್ಟ ಕಡಿಮೆಯಾಗುತ್ತಿದೆ ಹಾಗೂ ಪ್ರತಿ ವರ್ಷ ಪಿಹೆಚ್.ಡಿ ಪದವಿ ಪಡೆಯುತ್ತಿರುವ ಅಭ್ಯರ್ಥಿಗಳ ಸಂಖ್ಯೆಯೂ ಕಡಿಮೆಯಾಗುತ್ತಿರುವುದು ಕಂಡು ಬರುತ್ತಿರುವುದರಿಂದ ಈ ಬಗ್ಗೆ ಪುನರ್ ಪರಿಶೀಲಿಸುವುದು ಸೂಕ್ತವೆಂದು ತಿಳಿಸಿದರು.<br><br>ಈ ಸಂಬಂಧ ಮಾತನಾಡಿದ ಮಾನ್ಯ ಕುಲಪತಿಗಳು ಪಿಹೆಚ್.ಡಿ Enroll ಹೆಚ್ಚಿಸುವ ಉದ್ದೇಶದಿಂದ ಪ್ರಸ್ತುತ ಪಿಹೆಚ್.ಡಿ ನಿಯಮಾವಳಿ 2017ರ ತಿದ್ದುಪಡಿಯನ್ನು ಮತ್ತೆ ಪರಿಷ್ಕರಿಸುವುದು ಸೂಕ್ತವಲ್ಲ. ಪಿಹೆಚ್.ಡಿಯ ಐದು ವರ್ಷದ ಅಂಕಿ-ಅಂಶಗಳನ್ನು ಪಡೆದು, ಪರಿಶೀಲಿಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಸದ್ಯಕ್ಕೆ ಪಿಹೆಚ್.ಡಿ ಸಮಿತಿ ಸಭೆಯಲ್ಲಿ ಪರಿಷ್ಕರಿಸಲಾಗಿರುವ ಪಿಹೆಚ್.ಡಿ ನಿಯಮಾವಳಿ 2017 ಅನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳಲಾಗುವುದೆಂದು ತಿಳಿಸಿದರು. |
| **ತೀರ್ಮಾನ** | ದಿನಾಂಕ: 07-03-2020 ರಂದು ಪ್ರೊ. ಡಿ. ಆನಂದ್‌ರವರ ಅಧ್ಯಕ್ಷತೆಯಲ್ಲಿ ನಡೆದ ಪಿಹೆಚ್.ಡಿ ನಿಯಮಾವಳಿಗಳ ಸಮಿತಿ ಸಭೆಯು 2017ರ ಪಿಹೆಚ್.ಡಿ ನಿಯಮವಳಿಗಳಿಗೆ ತಿದ್ದುಪಡಿ ಮಾಡಿ ಶಿಫಾರಸು ಮಾಡಿರುವ ನಾಲ್ಕು ಅಂಶಗಳನ್ನು ಶಿಕ್ಷಣ ಮಂಡಳಿ ಸಭೆಯು ಅನುಮೋದಿಸಿತು |
| II.7 | ವಿಶ್ವವಿದ್ಯಾನಿಲಯದ ಘಟಕ ಕಾಲೇಜಿನ ಅಧ್ಯಾಪಕರುಗಳಿಗೆ ಪ್ರಾಧ್ಯಾಪಕ Level 14(ಎಜಿಪಿ 10,000) ಪದೋನ್ನತಿ ನೀಡುವ ಸಂಬಂಧ ಸಿ.ಎ.ಎಸ್ ಸಮಿತಿಯು ಸಿದ್ಧಪಡಿಸಿರುವ Score cardಅನ್ನು ಶೈಕ್ಷಣಿಕ ಮಂಡಳಿ ಸಭೆಯಅನುಮೋದನೆಗೆ ಮಂಡಿಸುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಘಟಕ ಕಾಲೇಜಿನ ಅಧ್ಯಾಪಕರುಗಳಿಗೆ ಪ್ರಾಧ್ಯಾಪಕ Level 14(ಎಜಿಪಿ 10,000) ಪದೋನ್ನತಿ ನೀಡುವ ಸಂಬಂಧ ಸಿ.ಎ.ಎಸ್ ಸಮಿತಿಯು ಸಿದ್ಧಪಡಿಸಿರುವ Score cardಅನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅನುಮೋದಿಸಲಾಯಿತು |
| II.8 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರಾಸಾಯನಿಕ ಜೀವಶಾಸ್ತ್ರ(Chemical Biology) ಕೋರ್ಸ್‌ನ್ನು ಪ್ರಾರಂಭಿಸುವ ಬಗ್ಗೆ. |

| | |
|---|---|
| ತೀರ್ಮಾನ | 2021-22ನೇ ಶೈಕ್ಷಣಿಕ ಸಾಲಿನಿಂದ ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಅಡಿಯಲ್ಲಿ ಸ್ನಾತಕೋತ್ತರ ಪದವಿಯ ರಾಸಾಯನಿಕ ಜೀವಶಾಸ್ತ್ರ(Chemical Biology) ಕೋರ್ಸ್‌ನ್ನು ಪ್ರಾರಂಭಿಸಲು ಸಭೆಯು ಅನುಮೋದಿಸಿತು. |
| II.9 | ದೂರಶಿಕ್ಷಣದ ಕಾರ್ಯಕ್ರಮದಡಿಯಲ್ಲಿ ಜರುಗುವ ಸ್ನಾತಕ/ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳನ್ನು ತೇರ್ಗಡೆಗೊಳಿಸುವ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ, ಕೋವಿಡ್-19 ವೈರಾಣು ಎಲ್ಲೆಡೆ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಕಾಲೇಜುಗಳಿಗೆ ರಜೆ ಘೋಷಣೆಯಾಗಿದ್ದ ಕಾರಣ ಪರೀಕ್ಷೆಗಳು ಜರುಗಿರುವುದಿಲ್ಲ. ಯುಜಿಸಿ ಹಾಗೂ ರಾಜ್ಯ ಸರ್ಕಾರದ ನಿರ್ದೇಶನದನ್ವಯ ಅಂತಿಮ ವರ್ಷದ ಪರೀಕ್ಷೆಗಳನ್ನು ಮಾತ್ರ ನಡೆಸಿ, ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳ ಫಲಿತಾಂಶವನ್ನು ಅಂತರಿಕ ಅಂಕಗಳ ಆಧಾರದ ಮೇಲೆ ಹಾಗೂ ದ್ವಿತೀಯ ಸೆಮಿಸ್ಟರ್ ವಿದ್ಯಾರ್ಥಿಗಳ ಫಲಿತಾಂಶವನ್ನು ಮೊದಲನೇ ಸೆಮಿಸ್ಟರ್‌ನ ಅಂಕಗಳ ಆಧಾರದ ಮೇಲೆ ಪ್ರಕಟಿಸಿ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಸ್ನಾತಕ/ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳನ್ನು ತೇರ್ಗಡೆಗೊಳಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಬೇಕೆಂದು ತಿಳಿಸಿದರು. |
| ತೀರ್ಮಾನ | ದೂರಶಿಕ್ಷಣದ ಕಾರ್ಯಕ್ರಮದಡಿಯಲ್ಲಿ ಜರುಗುವ ಸ್ನಾತಕ/ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶಾತಿ ಪಡೆದಿರುವ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳ ಫಲಿತಾಂಶವನ್ನು ಅಂತರಿಕ ಅಂಕಗಳ ಆಧಾರದ ಮೇಲೆ ಹಾಗೂ ದ್ವಿತೀಯ ಸೆಮಿಸ್ಟರ್ ವಿದ್ಯಾರ್ಥಿಗಳ ಫಲಿತಾಂಶವನ್ನು ಮೊದಲನೇ ಸೆಮಿಸ್ಟರ್‌ನ ಅಂಕಗಳ ಆಧಾರದ ಮೇಲೆ ಪ್ರಕಟಿಸುವ ಮೂಲಕ ವಿದ್ಯಾರ್ಥಿಗಳನ್ನು ತೇರ್ಗಡೆಗೊಳಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.10 | ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರಕ್ಕೆ ಸಂಬಂಧಿಸಿದ ಕರಡು ಪರಿನಿಯಮಾವಳಿಯನ್ನು ಮಾರ್ಪಡಿಸಿ ಸರ್ಕಾರಕ್ಕೆ ಸಲ್ಲಿಸಿರುವ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಸ್ತುತ 10 ಕೋರ್ಸುಗಳು ಪ್ರಾರಂಭವಾಗಿದ್ದು, ಸರ್ಕಾರವು ಈ ಕೋರ್ಸುಗಳಿಗೆ ಅವಶ್ಯಕತೆಗಳಿಗನುಗುಣವಾಗಿ ಆರ್ಥಿಕ ಇಲಾಖೆಯು ವಿಧಿಸಿರುವ ಆರ್ಥಿಕ ನಿಬಂಧನೆಗಳನ್ನು ಅಳವಡಿಸಿಕೊಂಡು ಹೊಸ ಹುದ್ದೆಗಳನ್ನು ಸೃಜಿಸಿ ಪರಿನಿಯಮಾವಳಿಯಲ್ಲಿ ಸೇರ್ಪಡೆಗೊಳಿಸಬೇಕೆಂದು ತಿಳಿಸಿರುವ ಹಿನ್ನೆಲೆಯಲ್ಲಿ, ಈ ಸಂಬಂಧ ವಿಶ್ವವಿದ್ಯಾನಿಲಯವು ಸಮಿತಿಯನ್ನು ರಚಿಸಿತ್ತು. ಸಮಿತಿಯು ಕೇಂದ್ರಕ್ಕೆ ಸಂಬಂಧಿಸಿದ 10 ಕೋರ್ಸುಗಳ ಅವಶ್ಯಕತೆಗಳಿಗನುಗುಣವಾಗಿ ಹುದ್ದೆಗಳನ್ನು ಗುರುತಿಸಿ, ಸಲ್ಲಿಸಿರುವ ವರದಿಯನ್ನು ಆಧಾರಿಸಿ ಹುದ್ದೆಗಳ ಮಂಜೂರಾತಿಗೆ 10 ಕೋರ್ಸುಗಳಿಗೆ ಸೃಜಿಸಿರುವ ಹುದ್ದೆಗಳನ್ನು ಕರಡು ಪರಿನಿಯಮಾವಳಿಯಲ್ಲಿ ಸೇರ್ಪಡೆಗೊಳಿಸಿ ಸನ್ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ದಿನಾಂಕ: 03-09-2020ರಂದು ಸರ್ಕಾರಕ್ಕೆ ಪತ್ರ ಬರೆದಿರುವುದನ್ನು ಸಭೆಯ ಗಮನಕ್ಕೆ ತರುತ್ತಾ, ಈಗಾಗಲೇ ಸನ್ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರಕ್ಕೆ ಸಂಬಂಧಿಸಿದ ಕರಡು ಪರಿನಿಯಮಾವಳಿಯನ್ನು ಮಾರ್ಪಡಿಸಿ ಸರ್ಕಾರಕ್ಕೆ ಸಲ್ಲಿಸಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಬೇಕೆಂದು ತಿಳಿಸಿದರು. |
| ತೀರ್ಮಾನ | ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರಕ್ಕೆ ಸಂಬಂಧಿಸಿದ ಕರಡು ಪರಿನಿಯಮಾವಳಿಯನ್ನು ಮಾರ್ಪಡಿಸಿ ಸನ್ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಸಲ್ಲಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |

| | |
|---|---|
| II.11 | ಪ್ರೊ. ಡಾ.ರುದ್ರಮ್ಮ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ಪ್ರೊ.ಡಾ.ರುದ್ರಮ್ಮ , ನಿವೃತ್ತ ಪ್ರಾಧ್ಯಾಪಕರು, ಆಹಾರ ವಿಜ್ಞಾನ ಮತ್ತು ಪೋಷಣಾ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಸ್ಮರಣಾರ್ಥ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ೨೦೦೦ರ ಅನ್ವಯ ಪ್ರಕರಣ ೩೧ (2) (IX) ಪ್ರಕಾರ ಸ್ನಾತಕೋತ್ತರ ಪದವಿಯ M.Sc Food Science and Nutrition (Stream I) ಮತ್ತು ಸ್ನಾತಕೋತ್ತರ ಪದವಿಯ M.Sc Human Development ವಿಷಯದಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡಲು ಸಭೆಯಲ್ಲಿ ಅನುಮೋದಿಸಲಾಯಿತು. |
| II.12 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಸ್ಥಾಪಿಸುವ ಬಗ್ಗೆ ಸಿದ್ಧಪಡಿಸಿರುವ ಪರಿಷ್ಕೃತ ಪರಿನಿಯಮಾವಳಿಯ ಅನುಮೋದನೆಗಾಗಿ |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಸ್ಥಾಪಿಸುವ ಬಗ್ಗೆ ಸರ್ಕಾರದ ನಿರ್ದೇಶನದಂತೆ ಸಿದ್ಧಪಡಿಸಿರುವ ಪರಿಷ್ಕೃತ ಪರಿನಿಯಮಾವಳಿಯನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಅನುಮೋದಿಸಲಾಯಿತು. |
| II.13 | ಕೃಷ್ಣಬಾಯಿ ಗುಂಡೋಪಂಥ್ ಚಿನ್ನದ ಪದಕ, ಸುಮತಿ ಶ್ರೀನಿವಾಸನ್ ಚಿನ್ನದ ಪದಕ. ಸುಮಿತ್ರ ಚಿಸ್ಥಿ ಮೆಮೋರಿಯಲ್ ಚಿನ್ನದ ಪದಕ ದತ್ತಿಗಳ ಮೂಲ ಪರತ್ತುಗಳಿಗೆ ತಿದ್ದುಪಡಿ ಮಾಡುವ ಬಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ಕೃಷ್ಣಬಾಯಿ ಗುಂಡೋಪಂಥ್ ಚಿನ್ನದ ಪದಕ, ಸುಮತಿ ಶ್ರೀನಿವಾಸನ್ ಚಿನ್ನದ ಪದಕ. ಸುಮಿತ್ರ ಚಿಸ್ಥಿ ಮೆಮೋರಿಯಲ್ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡಲಾಗಿದ್ದು, ಅದರಲ್ಲಿ ಸುಮತಿ ಶ್ರೀನಿವಾಸನ್ ಚಿನ್ನದ ಪದಕ ಮತ್ತು ಸುಮಿತ್ರ ಚಿಸ್ಥಿ ಮೆಮೋರಿಯಲ್ ಚಿನ್ನದ ಪದಕ ದತ್ತಿಯಲ್ಲಿ ಗೃಹ ವಿಜ್ಞಾನ ವಿಷಯಕ್ಕೂ ದತ್ತಿ ಸ್ಥಾಪನೆಯಾಗಿರುತ್ತದೆ. ಆದರೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಬಿ.ಎಸ್ಸಿ ಗೃಹ ವಿಜ್ಞಾನ ವಿಷಯವು ಇಲ್ಲದಿರುವುದರಿಂದ, ಇದಕ್ಕೆ ಬದಲಾಗಿ ಬಿ.ಎಸ್ಸಿ Food Science & Nutrition ಕೋರ್ಸಿನ ವಿದ್ಯಾರ್ಥಿಗಳಿಗೆ ದತ್ತಿಗಳ ಪದಕ ಬಹುಮಾನಗಳನ್ನು ನೀಡುವ ಬಗ್ಗೆ ಮೂಲ ಷರತ್ತುಗಳಿಗೆ ತಿದ್ದುಪಡಿ ಮಾಡಿರುವುದನ್ನು ಈಗಾಗಲೇ ಸಿಂಡಿಕೇಟ್ ಸಭೆಯು ಅನುಮೋದಿಸಿರುತ್ತದೆಂದು ಸಭೆಯ ಗಮನಕ್ಕೆ ತಂದರು. |
| **ತೀರ್ಮಾನ** | ಕೃಷ್ಣಬಾಯಿ ಗುಂಡೋಪಂಥ್ ಚಿನ್ನದ ಪದಕ, ಸುಮತಿ ಶ್ರೀನಿವಾಸನ್ ಚಿನ್ನದ ಪದಕ. ಸುಮಿತ್ರ ಚಿಸ್ಥಿ ಮೆಮೋರಿಯಲ್ ಚಿನ್ನದ ಪದಕ ದತ್ತಿಗಳ ಮೂಲ ಪರತ್ತುಗಳಿಗೆ ತಿದ್ದುಪಡಿ ಮಾಡಿರುವುದನ್ನು ಸಭೆಯು ಅನುಮೋದಿಸಿತು. |
| III.I | Specialized ಕೋರ್ಸುಗಳ ಅಧ್ಯಯನ ಮಂಡಳಿಗಳ ಶಿಫಾರಸ್ಸು ನಿರ್ಣಯಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯಅನುಮೋದನೆಗೆ ಮಂಡಿಸುತ್ತಿರುವ ಬಗ್ಗೆ. |
| **ತೀರ್ಮಾನ** | ೨೦೨೦-೨೧ನೇ ಶೈಕ್ಷಣಿಕ ಸಾಲಿನಿಂದ ಮೈಸೂರಿನ ನಟನ ರಂಗಶಾಲೆ ಸಂಸ್ಥೆಯಲ್ಲಿನ Diploma in Theatre ಮತ್ತು Certificate Course in Theatre Acting Specialized ಕೋರ್ಸುಗಳಿಗೆ ಹಾಗೂ Kannada Academy, 6126 Shadycreek Dr.Agoura Hills, CA-91301, USA ಸಂಸ್ಥೆಯಲ್ಲಿನ Certificate Course in Kannada Language and Culture Specialized ಕೋರ್ಸುಗಳಿಗೆ ರೆಗ್ಯುಲೇಷನ್, ಪಠ್ಯಕ್ರಮಗಳು ಮತ್ತು Scheme of Examination ಗಳಿಗೆ ಆಯಾ ಅಧ್ಯಯನ ಮಂಡಳಿಗಳು ನೀಡಿರುವ ಶಿಫಾರಸ್ಸು ಮತ್ತು ನಿರ್ಣಯಗಳನ್ವಯ ಪ್ರಾರಂಭಿಸಲು ಕಲಾ ನಿಕಾಯದ ತೀರ್ಮಾನವನ್ನು ಕಾಯ್ದಿರಿಸಿವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |

| | |
|---|---|
| III.II | Specialized ಕೋರ್ಸುಗಳ ಅಧ್ಯಯನ ಮಂಡಳಿಗಳ ಶಿಫಾರಸ್ಸು ನಿರ್ಣಯಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯಅನುಮೋದನೆಗೆ ಮಂಡಿಸುತ್ತಿರುವ ಬಗ್ಗೆ. |
| ತೀರ್ಮಾನ | 2020-21ನೇ ಶೈಕ್ಷಣಿಕ ಸಾಲಿನಿಂದ ಮೈಸೂರಿನ ಶಾರದ ವಿಲಾಸ ಶಿಕ್ಷಣ ಸಂಸ್ಥೆಯಲ್ಲಿನ B.Sc (Hon's) (Data Science & Artificial Intelligence) Specialized ಕೋರ್ಸಿಗೆ ಹಾಗೂ IIFA Lancaster Degree College, Mysuru ಸಂಸ್ಥೆಯಲ್ಲಿನ B.Sc (Game Designing & Development, B.Sc (Animation & Multimedia), B.Sc (Visual Communication) and M.Sc (Interior Design & Management) Specialized ಕೋರ್ಸುಗಳಿಗೆ ರೆಗ್ಯುಲೇಷನ್, ಪಠ್ಯಕ್ರಮಗಳು ಮತ್ತು Scheme of Examination ಗಳಿಗೆ ಆಯಾ ಅಧ್ಯಯನ ಮಂಡಳಿಗಳು ನೀಡಿರುವ ಶಿಫಾರಸ್ಸು ಮತ್ತು ನಿರ್ಣಯಗಳನ್ವಯ ಪ್ರಾರಂಭಿಸಲು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ತೀರ್ಮಾನವನ್ನು ಕಾಯ್ದಿರಿಸಿ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| III.III | Specialized ಕೋರ್ಸುಗಳ ಅಧ್ಯಯನ ಮಂಡಳಿಗಳ ಶಿಫಾರಸ್ಸು ನಿರ್ಣಯಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯಅನುಮೋದನೆಗೆ ಮಂಡಿಸುತ್ತಿರುವ ಬಗ್ಗೆ. |
| ತೀರ್ಮಾನ | 2020-21ನೇ ಶೈಕ್ಷಣಿಕ ಸಾಲಿನಿಂದ International College of Financial Planning ಸಂಸ್ಥೆಯಲ್ಲಿನ M.A. (Fashion entrepreneurship), M.Com. (Financial Planning) and M.Com (Financial Analysis) Specialized ಕೋರ್ಸುಗಳಿಗೆ ಹಾಗೂ Universal Institute for Private Training, Kuwait ಸಂಸ್ಥೆಯಲ್ಲಿನ B.Com (Accounting and Finance), B.B.A (Marketing & Human Resource) and B.A (Interior Design) Specialized ಕೋರ್ಸುಗಳಿಗೆ ರೆಗ್ಯುಲೇಷನ್, ಪಠ್ಯಕ್ರಮಗಳು ಮತ್ತು Scheme of Examination ಗಳಿಗೆ ಆಯಾ ಅಧ್ಯಯನ ಮಂಡಳಿಗಳು ನೀಡಿರುವ ಶಿಫಾರಸ್ಸು ಮತ್ತು ನಿರ್ಣಯಗಳನ್ವಯ ಪ್ರಾರಂಭಿಸಲು ವಾಣಿಜ್ಯ ನಿಕಾಯದ ತೀರ್ಮಾನವನ್ನು ಕಾಯ್ದಿರಿಸಿ ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| IV.1 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರುಗಳ ಅಂತರ್‌ಶಿಸ್ತೀಯ/ಬಹುಶಿಸ್ತೀಯ ವಿಷಯ ಸಮಿತಿಗಳಲ್ಲಿ ಪಿಹೆಚ್.ಡಿ ಮಾರ್ಗದರ್ಶಿಗಳಾಗಿರುವ ಬಗ್ಗೆ. |
| | ಪ್ರೊ.ಎಸ್.ಆರ್.ನಿರಂಜನ್ ಇವರು ಮಾತನಾಡಿ, ಜೈವಿಕ ತಂತ್ರಜ್ಞಾನ ಹಾಗೂ ಇತರೆ ವಿಷಯಗಳಲ್ಲಿ ಹಲವಾರು ಅಧ್ಯಾಪಕರುಗಳು ಅಂತರಶಿಸ್ತೀಯ/ಬಹುಶಿಸ್ತೀಯ ವಿಷಯ ಸಮಿತಿಗಳಲ್ಲಿ ಪಿಹೆಚ್.ಡಿ ಮಾರ್ಗದರ್ಶಕರಾಗಿ ಅನೇಕ ಅಭ್ಯರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದು, ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಅಂತರಶಿಸ್ತೀಯ/ಬಹುಶಿಸ್ತೀಯ ವಿಷಯ ಸಮಿತಿಗಳು ಕಾರ್ಯನಿರ್ವಹಿಸುತ್ತಿಲ್ಲದಿರುವುದು ಹಾಗೂ ಅಂತಹ ಮಾರ್ಗದರ್ಶಕರು ತಮ್ಮ ವಿಭಾಗವಲ್ಲದ ವಿಷಯದಲ್ಲಿ ಪಿಹೆಚ್.ಡಿ ಅಭ್ಯರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಪಿಹೆಚ್.ಡಿ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಈ ಸಂಬಂಧ ಅಂತರಶಿಸ್ತೀಯ ಮಂಡಳಿ ರಚಿಸಿ, ಮಂಡಳಿ ಅಂಗೀಕರಿಸಿದರೆ ಮಾತ್ರ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವಂತೆ ಆದೇಶಿಸುವ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.<br><br>ಪ್ರೊ.ಜಿ.ವೆಂಕಟೇಶ್‌ಕುಮಾರ್, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರು ಇವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೆಲವು ವಿಭಾಗಗಳಲ್ಲಿ ತಾತ್ಕಾಲಿಕ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳು ಮಾರ್ಗದರ್ಶಕರಾಗಿ |

| | |
|---|---|
| | ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಿರುತ್ತದೆ. ಆದ್ದರಿಂದ, ಪ್ರಸ್ತುತ ತಾತ್ಕಾಲಿಕ/ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳು ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುತ್ತಿರುವವರನ್ನು ಗುರುತಿಸಿ, ಅವರ ಮಾನ್ಯತೆಯನ್ನು ರದ್ದುಗೊಳಿಸಬೇಕೆಂದು ಹಾಗೂ ಇನ್ನು ಮುಂದೆ ಯಾವುದೇ ಕಾರಣಕ್ಕೂ ಪ್ರಸ್ತುತ ತಾತ್ಕಾಲಿಕ/ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳು ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವುದಕ್ಕೆ ಮಾನ್ಯತೆ ನೀಡಬಾರದೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಕೆಲವು ಸಂಶೋಧನಾ ವಿದ್ಯಾರ್ಥಿಗಳು ಅಂತಿಮ ಮಹಾಪ್ರಬಂಧವನ್ನು ಮಂಡಿಸುತ್ತಿರುವುದರಿಂದ ಅಂತಹವರುಗಳನ್ನು ಹೊರತುಪಡಿಸಿ, Humanities, National Science and Physical Science ವಿಷಯಗಳಿಗೆ ಪ್ರತ್ಯೇಕ ಅಂತರ್‌ಶಿಸ್ತೀಯ ಮಂಡಳಿ ರಚಿಸಲಾಗುವುದು. ಅಧ್ಯಾಪಕರುಗಳು ಮಾರ್ಗದರ್ಶಕರಾಗಲು ಅರ್ಜಿ ಸಲ್ಲಿಸಿದಾಗ, ಮಾರ್ಗದರ್ಶನಕ್ಕೆ ಮಾನ್ಯತೆ ನೀಡುವ ಸಂಬಂಧ ಮಂಡಳಿಯ ಸಮಿತಿ ಸದಸ್ಯರುಗಳು ಚರ್ಚಿಸಿ, ತೆಗೆದುಕೊಳ್ಳುವ ತೀರ್ಮಾನದ ಮೇರೆಗೆ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರುಗಳ ಅಂತರಶಿಸ್ತೀಯ/ಬಹುಶಿಸ್ತೀಯ ವಿಷಯ ಸಮಿತಿಗಳಲ್ಲಿ ಪಿಹೆಚ್.ಡಿ ಮಾರ್ಗದರ್ಶಕರುಗಳನ್ನಾಗಿ ಮಾನ್ಯತೆ ನೀಡುವ ಸಂಬಂಧ Humanities, National Science and Physical Science ವಿಷಯಗಳಿಗೆ ಪ್ರತ್ಯೇಕ ಅಂತರಶಿಸ್ತೀಯ ಮಂಡಳಿ ರಚಿಸಲಾಗುವುದು ಹಾಗೂ ಮಂಡಳಿ ಸಮಿತಿ ಸದಸ್ಯರುಗಳು ಚರ್ಚಿಸಿ ತೆಗೆದುಕೊಳ್ಳುವ ತೀರ್ಮಾನವನ್ನು ಅಂಗೀಕರಿಸಲಾಗುವುದು. |

ಇತರೆ ವಿಷಯಗಳು:

1) ಪ್ರೊ.ಜಿ.ವೆಂಕಟೇಶ್‌ಕುಮಾರ್‌ರವರು ಮಾತನಾಡಿ, ಪ್ರಸ್ತುತ ಕಾರ್ಯಸೂಚಿಯಲ್ಲಿ 3 ರಿಂದ 4 ವಿಷಯಗಳು ಈಗಾಗಲೇ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದ ನಂತರ ಈ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಲಾಗಿದೆ. ವಿಶ್ವವಿದ್ಯಾನಿಲಯಗಳಿಗೆ ಸಿಂಡಿಕೇಟ್ ಸಭೆಯು ನೀಡುವ ತೀರ್ಮಾನವು ಮುಖ್ಯ ಹಾಗೂ ಅಂತಿಮವಾಗಿರುತ್ತದೆ. ಆದ್ದರಿಂದ ಇನ್ನು ಮುಂದೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ವಿಷಯಗಳನ್ನು ಮಂಡಿಸಿ, ತದನಂತರ ಸಿಂಡಿಕೇಟ್ ಸಭೆಯಲ್ಲಿ ವಿಷಯಗಳನ್ನು ಮಂಡಿಸುವುದು ಸೂಕ್ತವೆಂದು ತಿಳಿಸಿದರು. ಇದಕ್ಕೆ ಇತರೆ ಶಿಕ್ಷಣ ಮಂಡಳಿ ಸದಸ್ಯರುಗಳು ದನಿಗೂಡಿಸಿದರು.ಈ ಪ್ರಸ್ತಾವನೆಗೆ ಮಾನ್ಯ ಕುಲಪತಿಯವರು ಒಪ್ಪಿಗೆ ಸೂಚಿಸಿದರು.

2) ಕೋವಿಡ್-19 ಹಿನ್ನೆಲೆಯಲ್ಲಿ ಚೀನಾ ವಿದ್ಯಾರ್ಥಿಗಳು ಅವರ ದೇಶಕ್ಕೆ ತೆರಳಿದ್ದು, ಈ ಸೆಮಿಸ್ಟರ್ ತರಗತಿಗೆ ಬರಲು ಸಾಧ್ಯವಾಗದಿರುವುದರಿಂದ ವಿದೇಶಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಸೆಮಿಸ್ಟರ್ ತರಗತಿಗಳನ್ನು ಮಾತ್ರ ಆನ್‌ಲೈನ್‌ನಲ್ಲಿ ತೆಗೆದುಕೊಳ್ಳಲು ವ್ಯವಸ್ಥೆ ಮಾಡಲಾಗುವುದೆಂದು ಮಾನ್ಯ ಕುಲಪತಿಯವರು ಸಭೆಯ ಗಮನಕ್ಕೆ ತಂದರು.

3) ಪ್ರೊ.ಆರ್.ರಾಜಣ್ಣರವರು ಮಾತನಾಡಿ, ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರ ಹುದ್ದೆಗೆ ಅಧಿಸೂಚನೆಯನ್ನು ಹೊರಡಿಸಿರುವುದರು ಸರಿಯಷ್ಟೆ. ಆದರೆ, ಈ ಬಗ್ಗೆ ಇನ್ನು ಕ್ರಮ ತೆಗೆದುಕೊಂಡಿರುವುದಿಲ್ಲ ಹಾಗೂ ಪ್ರತಿ ವರ್ಷ ಕಾಲೇಜುಗಳಿಗೆ ಸ್ವಾಯತ್ತತೆ ನೀಡುವ ಸಂಬಂಧ ಪರಾಮರ್ಶನ ಸಮಿತಿ ರಚಿಸಲಾಗುತ್ತದೆ.ಅದರಲ್ಲಿ ಒಂದು ಬಾರಿಯಾದರೂ ನನ್ನನ್ನು ಸಮಿತಿ ಸದಸ್ಯರನ್ನಾಗಿ ನೇಮಕ ಮಾಡಿರುವುದಿಲ್ಲವೆಂದು ಆಕ್ಷೇಪಣೆ ವ್ಯಕ್ತಪಡಿಸಿದರು.ಮುಂದುವರೆದು ಮಾತನಾಡುತ್ತಾ, ಇನ್ನು ಮುಂದಾದರೂ ಹಿರಿಯ ಪ್ರಾಧ್ಯಾಪಕರುಗಳನ್ನು ಪರಾಮರ್ಶನ ಸಮಿತಿಗೆ ಸದಸ್ಯರನ್ನಾಗಿ ಕಡ್ಡಾಯವಾಗಿ ಸೇರ್ಪಡೆಗೊಳಿಸಲು ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು. ಹಾಗೆಯೇ ವಿಶ್ವವಿದ್ಯಾನಿಲಯಲ್ಲಿ ಆಡಳಿತಾತ್ಮಕ ಹುದ್ದೆಗಳಲ್ಲಿ ಒಬ್ಬರೇ ಅಧ್ಯಾಪಕರು ಒಂದೇ ಹುದ್ದೆಯಲ್ಲಿ ಸುಮಾರು 5-6 ವರ್ಷದಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಮೂರು ವರ್ಷ ಸೇವಾವಧಿ ಮುಗಿದವರುಗಳನ್ನು ಬಿಡುಗಡೆಗೊಳಿಸಿ, ಸಾಮಾಜಿಕ ನ್ಯಾಯದ ಆಧಾರದ ಮೇಲೆ ಇತರೆ ಅಧ್ಯಾಪಕರುಗಳನ್ನು ನೇಮಕ ಮಾಡಬೇಕೆಂದು ಪ್ರಸ್ತಾಪಿಸಿದರು. ಈ ಸಂಬಂಧ ಮಾತನಾಡಿದ ಮಾನ್ಯ ಕುಲಪತಿಯವರು ಮೇಲ್ಕಂಡ ಅಂಶಗಳ ಬಗ್ಗೆ ವಿಶ್ವವಿದ್ಯಾನಿಲಯವು ಮುಂದಿನ ದಿನಗಳಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು ಹಾಗೂ ಸದಸ್ಯಕಾರ್ಯದರ್ಶಿ | ಕುಲಪತಿಗಳು ಹಾಗೂ ಅಧ್ಯಕ್ಷರು |